# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 22.12.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಪರ ಆಯುಕ್ತರು(ಆಡಳಿತ) |
| 2 | ಮೋಹನ್ ಕುಮಾರ್ | ಸದಸ್ಯರು | ಉಪ ಆಯುಕ್ತರು(ಆಸ್ತಿಗಳು)[ಪ್ರಭಾರ] |
| 3 | ಜೆ. ಭುವನೇಶ್ವರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 4 | ಎಲ್.ನಾಗರತ್ನ | ಸದಸ್ಯರು | ವಿಶೇಷ ಅಧಿಕಾರಿಗಳು |
| 5 | ರವೀಂದ್ರನ್ ಕೆ | ಸದಸ್ಯರು | |
| 6 | ಎನ್. ಶಾಂತಕುಮಾರಿ | ಸದಸ್ಯರು | |
| 7 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 8 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 9 | ರಾಜಣ್ಣ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/22/2012–13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ. ಬಸವಯ್ಯ, ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕಾಂಪೋಸ್ಟ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ನಂ.719, 7 'ಬಿ' ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್. 1ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು–560043 ರವರು ಮನವಿ ಸಲ್ಲಿಸಿ, ಗೌರವಧನ ಆಧಾರದ ಮೇಲೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಲಹೆಗಾರರಾಗಿ ನೇಮಿಸಿಕೊಳ್ಳಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಕಾರ್ಯವನ್ನು ಉತ್ತಮ ರೀತಿಯಲ್ಲಿ ಮತ್ತು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಪಾಲಿಕೆಯು ಹತ್ತು ಹಲವು ಕ್ರಮಗಳನ್ನು ಕೈಗೊಂಡಿದ್ದು, ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಒಬ್ಬ ನಿವೃತ್ತ ಹಿರಿಯ ಅಧಿಕಾರಿಯವರ ಸೇವೆಯು ಅವಶ್ಯಕವಾಗಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ ಸಿ. ಬಸವಯ್ಯ, ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು, ಇವರು ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ವಿಷಯದಲ್ಲಿ ಅನುಭವ ಹೊಂದಿರುವುದರಿಂದ ಸದರಿಯವರನ್ನು ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಒಂದು ಅವಧಿಗೆ (ದಿನಾಂಕ:15.11.2012 ರಿಂದ 14.11.2013ರ ವರೆಗೆ) ಈ ಕೆಳಕಂಡ ಷರತ್ತುಗೊಳಪಡಿಸಿ, ನೇಮಿಸಿಕೊಳ್ಳಲಾಗಿರುತ್ತದೆ.

1. ಸದರಿಯವರು ಅಪರ ಆಯುಕ್ತರು(ಆರೋಗ್ಯ) ರವರಿಗೆ ವರದಿ ಮಾಡುವುದು.
2. ಸದರಿಯವರ ನೇಮಕಾತಿ ಅವಧಿಯು ಒಂದು ವರ್ಷದ ಅವಧಿಯಾಗಿರುತ್ತದೆ.
3. ಸದರಿಯವರ ಸೇವೆಯು ಪಾಲಿಕೆಗೆ ಅನಗತ್ಯವೆಂದು ಕಂಡುಬಂದರೆ, ಆ ಕ್ಷಣದಿಂದಲೇ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುವುದು.
4. ಸದರಿಯವರು ಯಾವುದೇ ರೀತಿಯ ಹಣಕಾಸಿನ ಕಡತಗಳಿಗೆ ಅನುಮೋದನೆ ಅಥವಾ ಸಹಿ ಮಾಡುವ ಅಧಿಕಾರ ಹಾಗೂ ಶಾಸನಬದ್ಧ ಅಧಿಕಾರವನ್ನು ಹೊಂದಿರುವುದಿಲ್ಲ.

ಆದ್ದರಿಂದ, ಶ್ರೀ ಸಿ.ಬಸವಯ್ಯ, ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು, ಇವರನ್ನು ಒಂದು ವರ್ಷದ ಅವಧಿಗೆ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ನೇಮಿಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:27.11.2012ರ ಸಂಖ್ಯೆ:ಬಿ12(4)ಪಿಆರ್/139/2009-10ರ ಟಿಪ್ಪಣಿ.

**ನಿರ್ಣಯ:**

ಈ ಕೆಳಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರವಾದ ವರದಿಯೊಂದಿಗೆ ಕಡತವನ್ನು ಮರುಮಂಡಿಸಲು ಹಿಂದಿರುಗಿಸಿದೆ.

1. ಸರ್ಕಾರದ ಆದೇಶ ಸಂಖ್ಯೆ ಯುಡಿಡಿ 118 ಎಂಎನ್‌ಯು 2005, ದಿನಾಂಕ:25.06.2005ರ ರೀತ್ಯಾ ನಿವೃತ್ತ ಸರ್ಕಾರಿ ನೌಕರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.
2. ದಿನಾಂಕ:28.07.2009ರ ಆಯುಕ್ತರ ಆದೇಶದ ರೀತ್ಯ ಸದರಿಯವರನ್ನು ಮಾಸಿಕ ರೂ.30,000/- ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಮಿತಿಗಳ, ಕೌನ್ಸಿಲ್ ಹಾಗೂ ಸರ್ಕಾರದ ಅನುಮೋದನೆ ಪಡೆಯಲಾಗಿದೆಯೆ? ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ಮೇಲ್ಕಂಡಂತೆ ಅನುಮೋದನೆ ಪಡೆಯಲಾಗಿದೆಯೆ?
3. ಪುನಃ ದಿನಾಂಕ:17.11.2012ರಂದು ಮತ್ತೊಂದು ವರ್ಷದ ಅವಧಿಗೆ ಇವರನ್ನು ಮುಂದುವರೆಸುವ ಸಂದರ್ಭದಲ್ಲಿಯೂ ಸಹ ಸಮಿತಿಗಳ, ಕೌನ್ಸಿಲ್ ಹಾಗೂ ಸರ್ಕಾರದ ಅನುಮೋದನೆ ಪಡೆಯುವ ಅವಶ್ಯಕತೆ ಕಂಡು ಬರಲಿಲ್ಲವೆ?
4. ಮೇಲ್ಕಂಡ ಅವಧಿಗಳಲ್ಲಿ ಸದರಿಯವರು ನಿರ್ವಹಿಸಿದ ಕಾರ್ಯವೈಖರಿ ಕುರಿತಂತೆ ಮಾಹಿತಿಗಳನ್ನು ಸಮಿತಿಯ ಅವಗಾಹನೆಗೆ ಮಂಡಿಸುವುದು.
5. ಈ ಹಿಂದಿನ ಅವಧಿಯಲ್ಲಿ ಸದರಿಯವರಿಗೆ 30,000/-ರೂಗಳ ಗೌರವಧನ ಪಾವತಿಸಲು ನಿಯಮಗಳಲ್ಲಿ ಅವಕಾಶವಿದೆಯೆ? ಕೆ.ಸಿ.ಎಸ್.ಆರ್ ನಿಯಮದಂತೆ ನಿವೃತ್ತ ನೌಕರರಿಗೆ ಪಾವತಿಸಬೇಕಾದ ವೇತನಕ್ಕಿಂತ ಹೆಚ್ಚುವರಿಯಾಗಿ ಸದರಿಯವರಿಗೆ ಇದುವರೆವಿಗೂ ಪಾವತಿ ಮಾಡಿದ್ದಲ್ಲಿ, ಅಂತಹ ಆರ್ಥಿಕ ನಷ್ಟವನ್ನು ಯಾವ ವಿಧದಲ್ಲಿ ಭರಿಸಲಾಗುತ್ತದೆ ಎಂಬ ಬಗ್ಗೆ ವರದಿ ನೀಡುವುದು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/23/2012–13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಾಲಿಕೆಯ ಆಸ್ತಿಗಳನ್ನು ಅಂದರೆ ಉದ್ಯಾನವನ/ಆಟದ ಮೈದಾನ/ಖಾಲಿ ಜಾಗಗಳು/ಪಾಠಶಾಲೆಗಳು/ಆಸ್ಪತ್ರೆಗಳು/ಶೌಚಾಲಯಗಳು/ಗುತ್ತಿಗೆ ನೀಡಿರುವ ಆಸ್ತಿಗಳು ಇನ್ನು ಮುಂತಾದ ಪಾಲಿಕೆ ಆಸ್ತಿಗಳನ್ನು ಅಳತೆಮಾಡಿ ವಾರ್ಡ್‌ವಾರು ಆಸ್ತಿವಹಿಗಳನ್ನು ತೆರೆದು ಅವುಗಳಲ್ಲಿ ನಿರ್ದಿಷ್ಟವಾದ ಅಳತೆ, ವಿಸ್ತೀರ್ಣ ಹಾಗೂ ಚಕ್ಕುಬಂದಿ ಮುಂತಾದ ವಿವರಗಳನ್ನು ನಮೂದಿಸುವ ಉದ್ದೇಶಕ್ಕಾಗಿ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ–ಪರ್ಯಾವೇಕ್ಷಕರನ್ನು ಸರ್ಕಾರದ ಆದೇಶದಂತೆ ಕೆ.ಎಂ.ಸಿ ಕಾಯ್ದೆ–1976 ನಿಯಮ 20(ಎ)ರನ್ವಯ ದಿನಾಂಕ:01.01.2008ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಭೂಮಾಪಕರಿಗೆ ಮಾಸಿಕ ರೂ.10,000/– ಮತ್ತು ಪರ್ಯಾವೇಕ್ಷಕರಿಗೆ ಮಾಸಿಕ 12,000/–ರೂಗಳ ಸಂಚಿತ ವೇತನ ನಿಗಧಿಪಡಿಸಿ ನೇಮಕ ಮಾಡಿಕೊಳ್ಳಲಾಗಿತ್ತು.

ಪಾಲಿಕೆಯ ವ್ಯಾಪ್ತಿಯ 8 ವಲಯಗಳಲ್ಲಿ (198 ವಾರ್ಡ್‌ಗಳು) ಸುಮಾರು 5000 ಪಾಲಿಕೆ ಆಸ್ತಿಗಳು ಇರುವುದಾಗಿ ಅಂದಾಜಿಸಿ, ಇವುಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಲು ಪ್ರತಿ ವಲಯಕ್ಕೆ 2–3 ಜನ ಭೂಮಾಪಕರನ್ನು ನಿಯೋಜಿಸಿ ಎರಡು ವರ್ಷಗಳ ಅವಧಿಯಲ್ಲಿ ನಿವೃತ್ತ ಭೂ–ಪರ್ಯಾವೇಕ್ಷಕರ ನೇತೃತ್ವದಲ್ಲಿ ಸುಮಾರು 2420 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿಸಿ, ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ಚುನಾವಣಾ ಮಾರ್ಗಸೂಚಿ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 16 ಕೆರೆಗಳನ್ನು ಅಳತೆ ಮಾಡಿಸಿ ಸುಮಾರು 69 ಎಕರೆ 06 ಗುಂಟೆ ಒತ್ತುವರಿ ಪ್ರದೇಶವನ್ನು ಪತ್ತೆ ಮಾಡಿಸಲಾಗಿದೆ ಹಾಗೂ ಮಿಲ್ಲರ್‌ಟ್ಯಾಂಕ್ ರಸ್ತೆ ಏರಿಯಾದಲ್ಲಿ ಇರುವ ಬಿಳೇಕಹಳ್ಳಿ ಗ್ರಾಮದ ಸ.ನಂ:16, 18, 19ರ ಗಡಿಗಳನ್ನು ಗುರ್ತುಮಾಡಿಸಿ 56 ಬ್ಲಾಕುಗಳ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಸೂಚನೆಗಳಂತೆ ಯಲಹಂಕ ವಲಯದ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ. ನಿವೇಶನ, ಉದ್ಯಾನವನ ಹಾಗೂ ಇತರೆ ಜಾಗಗಳನ್ನು ಅಳತೆ ಮಾಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಇವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ಎರಡು ವರ್ಷಗಳ ಪ್ರಾರಂಭದಲ್ಲಿ 24 ಜನ ನಿವೃತ್ತ ಭೂಮಾಪಕರು ಕರ್ತವ್ಯಕ್ಕೆ ಹಾಜರಾಗಿದ್ದರೂ ಸಹ ಇವರ ವೈಯಕ್ತಿಕ ಕಾರಣಗಳ ಹಿನ್ನಲೆಯಲ್ಲಿ ಆಗಿಂದ್ದಾಗ್ಗೆ ಕರ್ತವ್ಯವನ್ನು ಬಿಟ್ಟು ಹೋಗಿದ್ದು, ಈ ಅವಧಿಯಲ್ಲಿ ಸರಾಸರಿ 15–16 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ–ಪರ್ಯಾವೇಕ್ಷಕರು ಕರ್ತವ್ಯ ನಿರ್ವಹಿಸಿರುತ್ತಾರೆ.

ಬಾಕಿ ಉಳಿದಿರುವ ಪಾಲಿಕೆ ಆಸ್ತಿಗಳ ಅಳತೆ ಕಾರ್ಯಗಳನ್ನು ಪೂರ್ಣಗೊಳಿಸಲು ಇವರ ಸೇವೆಯು ಅತ್ಯವಶ್ಯಕವಾಗಬೇಕಾದ ಹಿನ್ನಲೆಯಲ್ಲಿ ಸರ್ಕಾರದ ಆದೇಶದಂತೆ ಇವರ ಸೇವೆಯನ್ನು ದಿನಾಂಕ:01.01.2010 ರಿಂದ 31.12.2010ರ ವರೆವಿಗೆ ಮತ್ತು ದಿನಾಂಕ:01.01.2011 ರಿಂದ 31.12.2011ರ ವರೆವಿಗೆ ವಿಸ್ತರಿಸಲಾಗಿರುತ್ತದೆ. ಈ ಎರಡು ವರ್ಷಗಳ ಅವಧಿಯಲ್ಲಿ ಕ್ರಮವಾಗಿ ಸರಾಸರಿ 12 ರಿಂದ 15 ಜನರಂತೆ ಭೂಮಾಪಕರು ಹಾಗೂ 4 ಜನ ಭೂಪರ್ಯಾವೇಕ್ಷಕರು ಕಾರ್ಯನಿರ್ವಹಿಸಿದ್ದು, 1892 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ. ಈ ಪಾಲಿಕೆ



ಅಧ್ಯಕ್ಷರು
...ಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಸ್ತಿಗಳ ಅಳತೆ ಕೆಲಸದ ಜೊತೆಗೆ ಕಸವಿಲೇವಾರಿಗಾಗಿ ಪಾಲಿಕೆಗೆ ಹಸ್ತಾಂತರಗೊಂಡಿರುವ 4 ಸ್ಥಳಗಳಲ್ಲಿನ 370 ಎಕರೆ 5 ಗುಂಟೆ ಪ್ರದೇಶದ ಅಳತೆ ಮತ್ತು 8 ವಲಯಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಹಾಗೂ ರಾಜಕಾಲುವೆಗಳ ಅಳತೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಪ್ರದೇಶಗಳ ಅಳತೆ, ಖಾತೆ ಬದಲಾವಣೆಗಳಲ್ಲಿ ವಿವಾದಾಸ್ಪದವಾದ ಪ್ರಕರಣಗಳ ಅಳತೆ ಮುಂತಾದ ಕಾರ್ಯಗಳಿಗೆ ವಲಯ ಕಛೇರಿಯ ಅಧಿಕಾರಿಗಳು ಉಪಯೋಗಿಸಿಕೊಂಡಿರುತ್ತಾರೆ.

ಡಿಸೆಂಬರ್–2011ರ ಅಂತ್ಯಕ್ಕೆ ನಿವೃತ್ತಿ ಭೂಮಾಪನ ಸಿಬ್ಬಂದಿಯಿಂದ ಒಟ್ಟು 4312 ಪಾಲಿಕೆ ಆಸ್ತಿಗಳನ್ನು ಮೇಲೆ ವಿವರಿಸಿರುವ ಇತರೆ ಅಳತೆ ಕೆಲಸಗಳ ಜೊತೆಗೆ ಅಳತೆ ಮಾಡಿಸಿದ್ದು, ಇವುಗಳ ನಕ್ಷೆ ಹಾಗೂ ಇತರೆ ವಿವರಗಳನ್ನು ಕಛೇರಿಯಲ್ಲಿ ವಾರ್ಡ್‌ವಾರು ವಹಿಗಳಲ್ಲಿ ನಮೂದಿಸಲಾಗುತ್ತಿದೆ.

ಖಾಯಂ ಭೂಮಾಪನ ಸಿಬ್ಬಂದಿಯ ತೀವ್ರ ಕೊರತೆಯಿರುವ ಕಾರಣ, 8 ವಲಯ ಅಧಿಕಾರಿಗಳು ತಮ್ಮ ಕಛೇರಿಯ ದಿನನಿತ್ಯದ ತುರ್ತು ಕಾರ್ಯಗಳಿಗೆ ನಿವೃತ್ತ ಭೂಮಾಪನ ಸಿಬ್ಬಂದಿಯ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುತ್ತಾರೆ ಹಾಗೂ ಹಾಲೀ ನಿವೃತ್ತ ಭೂಮಾಪನ ಸಿಬ್ಬಂದಿಯು ಅಗತ್ಯಕ್ಕಿಂತ ಕಮ್ಮಿ ಇದ್ದು, ಈಗ ಕೇವಲ 12 ಜನ ನಿವೃತ್ತ ಭೂಮಾಪಕರು ಹಾಗೂ 3 ಜನ ನಿವೃತ್ತ ಭೂ ಪರ್ಯಾವೇಕ್ಷಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.

ನಿವೃತ್ತ ಭೂಮಾಪನ ಸಿಬ್ಬಂದಿಯ ನೇಮಕಾತಿ ಅವಧಿಯು ದಿನಾಂಕ:31.12.2011ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ, ಇನ್ನು ಸಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳ ಅಳತೆ ಕಾರ್ಯ ಬಾಕಿ ಇರುತ್ತದೆ ಹಾಗೂ ಈ ಕೆಳಕಂಡ ಕಾರ್ಯಗಳು ಇನ್ನೂ ನಿರ್ವಹಿಸಬೇಕಾಗಿರುವುದರಿಂದ, ಇವರ ಸೇವೆಯನ್ನು ದಿನಾಂಕ:01.01.2012 ರಿಂದ ಅನ್ವಯವಾಗುವಂತೆ ಪುನಃ 2 ವರ್ಷಗಳವರೆಗೆ ವಿಸ್ತರಿಸುವುದು ಅತ್ಯವಶ್ಯಕವಾಗಿರುತ್ತದೆ.

1. ಸುಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಲು ಬಾಕಿ ಇರುತ್ತದೆ ಹಾಗೂ ಆಸ್ತಿವಹಿಗಳಲ್ಲಿ ದಾಖಲಿಸುವ ಕಾರ್ಯ ಪ್ರಗತಿಯಲ್ಲಿರುತ್ತೆ.
2. ಹಾಲಿ ಇರುವ 12 ಜನ ನಿವೃತ್ತ ಭೂ ಮಾಪಕರುಗಳನ್ನು ಎಂಟು ವಲಯ ಕಛೇರಿಗಳಿಗೆ ತಲಾ ಒಬ್ಬರು ಅಥವಾ ಇಬ್ಬರಂತೆ ನಿಯೋಜಿಸಲಾಗಿದ್ದು, ವಲಯ ಕಛೇರಿಯ ಅಧಿಕಾರಿಗಳು ಇವರ ಸೇವೆಯನ್ನು ಪಾಲಿಕೆ ಆಸ್ತಿಗಳ ಅಳತೆ ಜೊತೆಗೆ ರಾಜಕಾಲುವೆ ಅಳತೆ, ಸ್ಲಂ ಅಳತೆ, ನ್ಯಾಯಾಲಯಕ್ಕೆ ಸಂಬಂಧಿಸಿದ ವಿವಾದಗಳು ಹಾಗೂ ಇತರೆ ಅತ್ಯವಶ್ಯಕವಾದ ತುರ್ತು ಕಾರ್ಯಗಳಿಗೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ.
3. ಅಳತೆಯಾಗಿರುವ ಆಸ್ತಿಗಳ ಪೈಕಿ ಈಗಾಗಲೇ ಉದ್ಯಾನವನ, ಆಟದ ಮೈದಾನ ಮತ್ತು ಖಾಲಿಜಾಗಗಳಿಗೆ ಸಂಬಂಧಿಸಿದಂತೆ ಒಟ್ಟು 1066 ಆಸ್ತಿಗಳನ್ನು ಮೊದಲ ಹಂತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇನ್ನೂ ಇಂತಹ ಸುಮಾರು 550 ಆಸ್ತಿಗಳನ್ನು ಪ್ರಕಟಣೆಗೆ ಕಳುಹಿಸಬೇಕಾಗಿರುತ್ತದೆ. ಕರ್ನಾಟಕ ಉದ್ಯಾನವನ/ಆಟದ ಮೈದಾನ ಮತ್ತು ಖಾಲಿ ಜಾಗಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ–1985ರ ಅಡಿಯಲ್ಲಿ ಇವುಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕಾಗಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4. ಹಾಲಿ ಈಗ ಅಳತೆ ಮಾಡಿರುವ ಆಸ್ತಿಗಳನ್ನು ಹಿಂದಿನ ಆಸ್ತಿದಾಖಲೆಗಳೊಂದಿಗೆ ಸಮನ್ವಯ ಮಾಡಿ ಕೈಬಿಟ್ಟಿರುವ ಆಸ್ತಿಗಳನ್ನು ಗುರ್ತಿಸಬೇಕಾಗಿದೆ.
5. ಅಳತೆಯಾಗಿರುವ ಆಸ್ತಿಗಳ ಪೈಕಿ 400 ಆಸ್ತಿಗಳಿಗೆ ಪಿ.ಐ.ಡಿ ಸಂಖ್ಯೆ ನೀಡಲಾಗಿದ್ದು, ಉಳಿದ ಆಸ್ತಿಗಳಿಗೆ ಮಾಹಿತಿ ಪಡೆದು ಪಿ.ಐ.ಡಿ ಸಂಖ್ಯೆಯನ್ನು ಆಸ್ತಿಗಳ ವಹಿಗಳಲ್ಲಿ ದಾಖಲಿಸಬೇಕಾಗಿದೆ.
6. ಮೇಲ್ಕಂಡ ಕಾರ್ಯಗಳ ಜೊತೆಗೆ ಮಳೆ ನೀರು ಚರಂಡಿ, ರಸ್ತೆ ಮುಂತಾದ ಜಾಗಗಳಲ್ಲಿ ಒತ್ತುವರಿಗಳನ್ನು ಗುರ್ತಿಸಿ, ತೆರವುಗೊಳಿಸುವ ಕಾರ್ಯಕ್ಕೆ ಭೂಮಾಪಕರ ಸೇವೆಯು ಅತ್ಯವಶ್ಯಕವಿರುತ್ತದೆ.
7. ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಲವಾರು ಭೂ–ವಿವಾದಗಳು ನ್ಯಾಯಾಲಯಗಳಲ್ಲಿ ದಾಖಲಾಗಿದ್ದು, ಇವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ನ್ಯಾಯಾಲಯಗಳಿಗೆ ಸಲ್ಲಿಸಲು ನಿವೃತ್ತ ಭೂಮಾಪಕರ ಸೇವೆಯ ಅವಶ್ಯಕವಾಗಿರುತ್ತದೆ.
8. ಇತ್ತೀಚಿಗೆ ಮಾಹಿತಿ ಕಾಯ್ದೆ ಹಕ್ಕಿನ ಅಡಿಯಲ್ಲಿ ಸಾರ್ವಜನಿಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ನೀಡುತ್ತಿದ್ದು, ಇವುಗಳನ್ನು ತಯಾರಿಸಿ ಕಾಲಮಿತಿಯೊಳಗೆ ಮಾಹಿತಿ ನೀಡಲು ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲೆ ವಿವರಿಸಿರುವ ವಿವರಿಸಿರುವ ಹಲವಾರು ಕಾರ್ಯಗಳಿಗೆ ನಿವೃತ್ತ ಭೂ–ಪರ್ಯಾವೇಕ್ಷಕರು/ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿ ಬೇಕಾಗಿರುವ ಕಾರಣದಿಂದ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ಭೂ–ಪರ್ಯಾವೇಕ್ಷಕರ ಗುತ್ತಿಗೆ ಸೇವೆಯ ಅವಧಿಯನ್ನು ದಿನಾಂಕ:01.01.2012ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಕೆ.ಎಂ.ಸಿ.ಕಾಯ್ದೆ–1976ರ ನಿಯಮ 20(ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26.06.2012ರ ಸಂಖ್ಯೆ:ಅ.ಆ(ಆಸ್ತಿ)ಇಸಿ/ಪಿಆರ್/40/2007–08ರ ಟಿಪ್ಪಣಿ.

**ನಿರ್ಣಯ:**

ಈ ಕೆಳಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರವಾದ ವರದಿಯೊಂದಿಗೆ ಕಡತವನ್ನು ಮರುಮಂಡಿಸಲು ಹಿಂದಿರುಗಿಸಿದೆ.

1. ಗುತ್ತಿಗೆ ಆಧಾರದ ಮೇಲೆ ನಿವೃತ್ತ ಭೂ–ಪರ್ಯಾವೇಕ್ಷಕರು ಹಾಗೂ ಭೂ ಮಾಪಕರುಗಳ ಗುತ್ತಿಗೆ ಅವಧಿಯನ್ನು ನವೀಕರಿಸಲು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಸರ್ಕಾರವು ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಭೂಮಾಪಕರ ವಿವರಗಳನ್ನು ಕೇಳಿದ್ದು, ಆದರೆ ನಿಯೋಜನೆ ಮೇರೆಗೆ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂಮಾಪಕರುಗಳ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2. ಹಾಲಿ ಆಸ್ತಿ ವಿಭಾಗದಲ್ಲಿ ನಿಯೋಜನೆ ಮೇರೆಗೆ ಯಾವೊಬ್ಬ ನೌಕರರು ಕಾರ್ಯನಿರ್ವಹಿಸುತ್ತಿಲ್ಲವೆಂದು ವರದಿಯಾಗಿದ್ದು, ಆದರೆ ಕಳೆದ ಆರು ವರ್ಷಗಳಿಂದ ಸದರಿ ವಿಭಾಗದಲ್ಲಿ ಶ್ರೀ. ಪರಮೇಶ್ವರ್, ಶ್ರೀ. ಶಿವಲಿಂಗಯ್ಯ ಹಾಗೂ ಇತರರು ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದ್ದು, ಸದರಿಯವರಿಗೆ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವೇತನ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವರದಿ ನೀಡುವುದು.
3. ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹಾಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಭೂಮಾಪಕರುಗಳ ಸಂಪೂರ್ಣ ವಿವರಗಳ ವರದಿಯೊಂದಿಗೆ ಮರುಮಂಡಿಸುವುದು.
4. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಭೂಮಾಪಕರುಗಳಿಗೆ ನೀಡಲಾಗುತ್ತಿರುವ ವೇತನ ಹಾಗೂ ಇತರೆ ಭತ್ಯೆಗಳ ವಿವರಗಳನ್ನು ಒದಗಿಸುವುದು.

**ವಿಷಯ ಸಂಖ್ಯೆ: ಸಿಆಸುಸ್ಥಾಸ/24/2012–13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಕಾರ್ಯವನ್ನು ಉತ್ತಮ ರೀತಿಯಲ್ಲಿ ಮತ್ತು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಪಾಲಿಕೆಯು ಹಲವು ಕ್ರಮಗಳನ್ನು ಕೈಗೊಂಡಿದ್ದು, ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ 50 ಮಂದಿ ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕಸ ವಿಲೇವಾರಿ ನಿರ್ವಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಅನುವಾಗುವಂತೆ ಮತ್ತು ಪ್ರಸಕ್ತ ಕಸ ವಿಲೇವಾರಿಯಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ 50 ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತಿಗೊಳಪಟ್ಟು ನೇಮಕ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿರುತ್ತದೆ.

1. ಪರಿಸರ ಅಭಿಯಂತರರುಗಳನ್ನು ಮಾನವ ಸಂಪನ್ಮೂಲ ಸಂಸ್ಥೆ (Manpower Agency) ಯಿಂದ ಹೊರಗುತ್ತಿಗೆ ಆಧಾರದ ಮೂಲಕ ಒಂದು ವರ್ಷದ ಅವಧಿಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.
2. ಈ ಅಭಿಯಂತರರುಗಳನ್ನು ಸದರಿ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದಲೇ ನೇಮಕ ಮಾಡಿಕೊಳ್ಳತಕ್ಕದ್ದು.
3. ಈ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ.ಯಲ್ಲಿ ಖಾಯಂ ಆಗಿ ಮುಂದುವರೆಯುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
4. ಈ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಬಿ.ಬಿ.ಎಂ.ಪಿ. ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು, ಯಾವುದೇ ಕಾರಣದಿಂದಲೂ ಸರ್ಕಾರದ ಅನುದಾನವನ್ನು ನೀಡಲಾಗುವುದಿಲ್ಲ.

ಅಧ್ಯಕ್ಷರು

ಇದರಂತೆ, ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ನೇಮಿಸಿಕೊಳ್ಳುವ ಸಂಬಂಧ ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಒಬ್ಬರು ಮಾತ್ರ ಭಾಗವಹಿಸಿರುವ ಹಿನ್ನಲೆಯಲ್ಲಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಮಾನವ ಸಂಪನ್ಮೂಲ ಸಂಸ್ಥೆಗಳು ಭಾಗವಹಿಸಿರುತ್ತಾರೆ.

1. M/s Wisdom Security Services
2. Transvision software and data solutions pvt. Ltd.

ಸದರಿ ಟೆಂಡರಿನ ತಾಂತ್ರಿಕ ಬಿಡ್‌ನ್ನು ದಿನಾಂಕ; 24-11-2012 ರಂದು ತೆರೆದು, ಟೆಂಡರ್ ನಿಯಮಾವಳಿಗಳಂತೆ ಮೌಲ್ಯಮಾಪನವನ್ನು ಮಾಡಲಾಗಿ, ಮೆ॥ M/s Wisdom Security Services ಸಂಸ್ಥೆಯವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.

Transvision software and data solutions pvt. Ltd. ಸಂಸ್ಥೆಯವರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ನೊಂದಣಿಯಾಗಿರುವುದಿಲ್ಲವಾದ್ದರಿಂದ ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲ.

ದಿನಾಂಕ: 29-11-2012 ರಂದು ಆರ್ಥಿಕ ಬಿಡ್‌ನ್ನು ತೆರಯಲಾಗಿದ್ದು, ಮೆ॥ Wisdom Security Services ಸಂಸ್ಥೆಯವರು ಸಲ್ಲಿಸಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. (ಸೇವಾ ಶುಲ್ಕವನ್ನು ಹೊರತುಪಡಿಸಿ)

| Description of Posts | Qualification | Approved amount per person per month (in Rs.) | No. of Days | Rate | Basic | DA | Conveyance | Gross | P.F | ESI | Service charges | Total |
|---|---|---|---|---|---|---|---|---|---|---|---|---|
| Environmental Engineer | B.E / M.Tech (Environment) / B.E (Civil) with Minimum 2 elected subjects in Environmental Engineering | 15000-00 | Per month | 15,000-00 | 8,000-00 | 4,000-00 | 3,000-00 | 15,000-00 | 1,636-00 | 713-00 | 1,500-00 | 18,846-00 |

Plus Service Tax as applicable will be charged on Total Billing.



ಅಧ್ಯಕ್ಷರು

ಇದರಂತೆ, ಒಬ್ಬ ಪರಿಸರ ಅಭಿಯಂತರರಿಗೆ ಮಾಸಿಕವಾಗಿ ರೂ. 18,846-00 ಪಾವತಿಸಬೇಕಾಗಿದ್ದು, ಒಟ್ಟು 50 ಮಂದಿ ಪರಿಸರ ಅಭಿಯಂತರರುಗಳಿಗೆ ಪ್ರತಿ ಮಾಹೆ ರೂ. 9,42,300-00 ಗಳನ್ನು ಪಾವತಿಸಬೇಕಾಗಿರುತ್ತದೆ. ಇದರಂತೆ, 18,846-00 x 50 x 12 (ಒಂದು ವರ್ಷಕ್ಕೆ)= ರೂ. 1,13,07,600-00 ಪಾವತಿಸಬೇಕಾಗಿರುತ್ತದೆ. (ಸೇವಾ ಶುಲ್ಕವನ್ನು ಹೊರತುಪಡಿಸಿ)

ಈ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಮೆ॥ Wisdom Security Services ಸಂಸ್ಥೆಯಿಂದ ಹೊರ ಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರುಗಳನ್ನು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಕಾರ್ಯಾದೇಶ ನೀಡುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:04.12.2012ರ ಸಂಖ್ಯೆ:ಬಿ12(6ಎ)ಪಿಆರ್/391/2012-13ರ ಟಿಪ್ಪಣಿ.

**ನಿರ್ಣಯ:**

ಈ ಕೆಳಕಂಡ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರವಾದ ವರದಿಯೊಂದಿಗೆ ಕಡತವನ್ನು ಮರುಮಂಡಿಸಲು ಹಿಂದಿರುಗಿಸಿದೆ.

1. ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪರಿಸರ ಅಭಿಯಂತರರ ವಿವರಣೆ ನೀಡುವುದು.
2. ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಿರುವ ಪರಿಸರ ಅಭಿಯಂತರರ ಕಾರ್ಯವೈಖರಿ ಬಗ್ಗೆ ಮಾಹಿತಿ ಒದಗಿಸುವುದು.
3. ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಟೆಂಡರ್ ಪ್ರಕ್ರಿಯೆಯು ಆಡಳಿತಾತ್ಮಕವಾಗಿ ಸಮರ್ಪಕವಾಗಿ ನಡೆದಿದೆಯೇ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ವರದಿ ನೀಡುವುದು.
4. ಪರಿಸರ ಅಭಿಯಂತರರುಗಳ ಅವಶ್ಯಕತೆ ಇದ್ದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿದ್ದು, ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಸೂಕ್ತವಾಗಿರುವುದಿಲ್ಲ. ಅವಶ್ಯಕತೆ ಇರುವಷ್ಟು ಅಭಿಯಂತರರುಗಳನ್ನು ನೇರ ನೇಮಕಾತಿ ಮಾಡಿಕೊಂಡಲ್ಲಿ ಕಸ ವಿಲೇವಾರಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:22.12.2012ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಆಡಳಿತಾತ್ಮಕ ವಿಷಯ ಕುರಿತಂತೆ ಪಾಲಿಕೆಯ ಜಂಟಿ ಆಯುಕ್ತರು(ಆಸ್ತಿಗಳು) ಕಛೇರಿಯ ತಪಾಸಣೆಯ ವರದಿ:

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಜಂಟಿ ಆಯುಕ್ತರು(ಆಸ್ತಿಗಳು) |
| 2 | ಶಾಂತಕುಮಾರಿ | ಸದಸ್ಯರು | ಉಪ ಆಯುಕ್ತರು(ಆಸ್ತಿಗಳು) [ಪ್ರಭಾರ] |
| 3 | ಮೋಹನ್ ಕುಮಾರ್ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 4 | ಮುರುಗೇಶ್ ಮೊದಲಿಯಾರ್ | ಸದಸ್ಯರು | ವಿಶೇಷ ಅಧಿಕಾರಿಗಳು |
| 5 | ರವೀಂದ್ರನ್ | ಸದಸ್ಯರು | |
| 6 | ಭುವನೇಶ್ವರಿ ಜೆ. | ಸದಸ್ಯರು | |
| 7 | ಎಲ್.ನಾಗರತ್ನ | ಸದಸ್ಯರು | |

*********

ದಿನಾಂಕ:22.12.2012ರಂದು ಬೆಳಿಗ್ಗೆ 12.00 ಗಂಟೆಗೆ ಪಾಲಿಕೆಯ ಮುಖ್ಯ ಕಛೇರಿಯಲ್ಲಿರುವ ಆಸ್ತಿ ವಿಭಾಗಕ್ಕೆ ಸಮಿತಿಯು ಬೇಟಿ ನೀಡಿ ಆಡಳಿತ್ಮಾತಕ ವಿಷಯಗಳ ಕುರಿತಂತೆ ತಪಾಸಣೆ ನಡೆಸಲಾಗಿ, ಸದರಿ ಕಛೇರಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ವಿನಾಃ ಕಾರಣ ಸುಮಾರು ವರ್ಷಗಳಿಂದ ವಿಲೇವಾರಿಯಾಗದೇ ಇದ್ದು, ಈ ಸಂಬಂಧ ಸೂಕ್ತ ವಿವರಣೆ ನೀಡಲು ತಪಾಸಣೆ ಸಂದರ್ಭದಲ್ಲಿ ಹಾಜರಿದ್ದ ಭೂಮಾಪಕರುಗಳು ಪೂರ್ಣ ಪ್ರಮಾಣದಲ್ಲಿ ವಿಫಲರಾಗಿದ್ದು, ಈ ಬಗ್ಗೆ ಸಮಿತಿಯು ತೀರ್ವತರನಾದ ಆಕ್ಷೇಪ ವ್ಯಕ್ತಪಡಿಸಿ ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಎಸ್.ಪರಮೇಶ್, ಪ್ರಥಮ ದರ್ಜೆ ಭೂಮಾಪಕರು ಮತ್ತು ಶ್ರೀ. ವಿ.ವಿ. ಶಿವರುದ್ರಯ್ಯ, ದ್ವಿತೀಯ ದರ್ಜೆ ಭೂಮಾಪಕರು ರವರುಗಳು ನೂರಾರು ಕಡತಗಳನ್ನು ಹಲವು ವರ್ಷಗಳಿಂದ ವಿನಾಃ ಕಾರಣ ವಿಲೇ ಇಟ್ಟಿದ್ದು, ಈ ಬಗ್ಗೆ ಸೂಕ್ತ ವಿವರಣೆ ಕೇಳಲಾಗಿ ಸದರಿ ಭೂಮಾಪಕರುಗಳು, ಎಲ್ಲಾ ಕಡತಗಳು ನ್ಯಾಯಾಲಯಕ್ಕೆ ಸಂಬಂಧಿಸಿದ್ದಾಗಿ ಆದ ಕಾರಣ ವಿಲೇ ಇಟ್ಟಿರುವುದಾಗಿ ಸಮಿತಿಗೆ ತಪ್ಪು ಮಾಹಿತಿ ನೀಡಿದ್ದು, ಅವರುಗಳ ಅಲ್ಮೇರಾದಲ್ಲಿ ಪರಿಶೀಲಿಸಲಾಗಿ ಹಲವಾರು ಖಾತಾ ನೊಂದಾವಣೆ, ವರ್ಗಾವಣೆ, ಪಾಲಿಕೆ ಆಸ್ತಿಗಳ ಸರ್ವೇ ಕಾರ್ಯ ನಡೆಸುವ ಬಗ್ಗೆ, ಹಕ್ಕು ಪತ್ರ ವಿತರಿಸುವ ಕಡತಗಳನ್ನು ವಿನಾಃ ಕಾರಣ ಸುಮಾರು ವರ್ಷಗಳಿಂದಲೂ ಹಾಗೇ ಇಟ್ಟಿದ್ದು, ಕಡತಗಳ ನಿರ್ವಹಣೆ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕುರಿತಂತೆ ಪಿ.ಆರ್.ವಹಿಗಳನ್ನು ಪರಿಶೀಲಿಸಲು ಕೇಳಲಾಗಿ ಸದರಿ ಭೂಮಾಪಕರುಗಳು ಯಾವುದೇ ಪಿ.ಆರ್. ವಹಿಗಳನ್ನು ಇಡದೆ ಆಡಳಿತಾತ್ಮಕವಾಗಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪಾಲಿಸದೇ ಲೋಪವೇಸಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸದರಿ ನೌಕರರುಗಳ ಸೇವಾ ವಿವರಗಳ ಬಗ್ಗೆ ಪರಿಶೀಲಿಸಲಾಗಿ ಶ್ರೀ. ವಿ.ವಿ.ಶಿವರುದ್ರಯ್ಯ, ದ್ವಿತೀಯ ದರ್ಜೆ ಭೂಮಾಪಕರುರವರು ದಿನಾಂಕ:06.01.2006 ರಿಂದ ಹಾಗೂ ಶ್ರೀ. ಎಸ್.ಪರಮೇಶ್, ಪ್ರಥಮ ದರ್ಜೆ ಭೂಮಾಪಕರುರವರು ದಿನಾಂಕ:18.09.2006ರಿಂದ ತಹಲ್ ವರೆವಿಗೂ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಭೂಮಾಪಕರುಗಳ ನಿಯೋಜನಾ ಅವಧಿಯು ಈಗಾಗಲೇ ಮುಕ್ತಾಯಗೊಂಡಿದ್ದು, ಇವರುಗಳನ್ನು ಈಗಲೂ ಸಹ ಪಾಲಿಕೆಯಲ್ಲಿ ಮುಂದುವರೆಸುತ್ತಿರುವ ಕ್ರಮವು ನಿಯಮಬಾಹಿರವಾಗಿದ್ದು ಹಾಗೂ ಸದರಿ ಇಬ್ಬರು ಭೂಮಾಪಕರುಗಳನ್ನು ಪಾಲಿಕೆಯಲ್ಲಿ ನಿಯೋಜಿಸುವಾಗ ಪಾಲಿಕೆಗೆ ನಿಯೋಜಿಸಲು ಸಕ್ಷಮ ಪ್ರಾಧಿಕಾರವಾದ ನಗರಾಭಿವೃದ್ಧಿ ಇಲಾಖೆಯ ಆದೇಶವಿಲ್ಲದಿದ್ದಾಗ್ಯೂ ಸಹ ಸದರಿ ಭೂಮಾಪಕರುಗಳನ್ನು ಪಾಲಿಕೆಯಲ್ಲಿ ಹಾಜರಾತಿ ತೆಗೆದುಕೊಂಡಿರುವ ಕ್ರಮವು ನಿಯಮಬಾಹಿರ ಕ್ರಮವಾಗಿರುತ್ತದೆ ಹಾಗೂ ಸರ್ಕಾರದ ಆದೇಶದ ಸಂಖ್ಯೆ:ಡಿಪಿಎಆರ್/16/ಎಸ್‌ಡಿಇ/83, ದಿನಾಂಕ:16.07.1983ರಂತೆ ಎರವಲು ಸೇವೆಯ ನೌಕರರ ಅವಧಿಯು ಪ್ರಾರಂಭಿಕ ಮೂರು ವರ್ಷ ಸಾಮಾನ್ಯ ಅವಧಿ ಮತ್ತು ಗರಿಷ್ಠ 5 ವರ್ಷಗಳಿಗೆ ಸೀಮಿತವಾಗಿರಬೇಕಾಗಿದ್ದು, ನಂತರ ಮಾತೃ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷ ಕಡ್ಡಾಯವಾಗಿ ಚಾತುರ್ಮಾಶ್ಯ ಅವಧಿ(Cooling Off period) ಅನ್ನು ಪೂರೈಸಬೇಕಾಗಿದ್ದು, ಸದರಿ ನೌಕರರುಗಳ ಎರವಲು ಸೇವೆಯ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಮೇಲ್ಕಂಡ ಸರ್ಕಾರದ ಆದೇಶದಂತೆ ಸದರಿರವರುಗಳು ಚಾತುರ್ಮಾಶ್ಯ ಅವಧಿ(Cooling Off period)ಯನ್ನು ಪೂರೈಸದ ಕಾರಣ ಕೂಡಲೇ ಸದರಿಯವರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸಲು ಸಮಿತಿಯು ಆಯುಕ್ತರಿಗೆ ಸೂಚಿಸುತ್ತದೆ ಹಾಗೂ ಹಾಲಿ ಪಾಲಿಕೆಯಲ್ಲಿ ಮಂಜೂರಾತಿಯಾಗಿ ಖಾಲಿ ಇರುವ ಭೂಮಾಪಕರು/ಭೂಪರ್ಯಾವೇಕ್ಷಕರುಗಳ ಹುದ್ದೆಗಳ ನೇಮಕಾತಿಯನ್ನು ಮಾಡಲು ತ್ವರಿತವಾಗಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಆದೇಶಿಸಲೂ ಸಹ ಆಯುಕ್ತರಿಗೆ ಸೂಚಿಸಲಾಗಿದೆ.

ಮುಂದುವರೆದಂತೆ ಸದರಿ ಭೂಮಾಪಕರುಗಳು ವಿನಾಃ ಕಾರಣ ಹಲವಾರು ವರ್ಷಗಳಿಂದ ಸಾರ್ವಜನಿಕರ ಕೆಲಸ ಕಾರ್ಯಗಳ ಕಡತಗಳನ್ನು ವಿಲೇವಾರಿ ಮಾಡದೇ ಕರ್ತವ್ಯ ಲೋಪವೇಸಗಿರುವುದು ಈ ಕೆಳಕಂಡ ಕೆಲವೇ ಕಡತಗಳಲ್ಲಿ ಸ್ಪಷ್ಟವಾಗಿ ಕಂಡುಬಂದಿರುವ ಹಿನ್ನೆಲೆಯಲ್ಲಿ



ಅಧ್ಯಕ್ಷರು

ಈ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಸದರಿ ಭೂಮಾಪಕರಿಬ್ಬರನ್ನು ಕೂಡಲೇ ಅಮಾನತ್ತುಪಡಿಸಿ ಮುಂದಿನ ಇಲಾಖಾ ವಿಚಾರಣೆ ನಡೆಸಲು ಆರೋಪ ಪಟ್ಟಿಯನ್ನು ಮಾತ್ರ ಇಲಾಖೆಗೆ ಕಳುಹಿಸಿ ಪಾಲಿಕೆಯಿಂದ ಬಿಡುಗಡೆಗೊಳಿಸತಕ್ಕದೆಂದು ಆಯುಕ್ತರಿಗೆ ಸೂಚಿಸಲಾಗಿದೆ.

ಸದರಿರವರುಗಳು ವಿನಾಃ ಕಾರಣ ವಿಲೇ ಇಟ್ಟದ್ದ ಕಡತಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಕಡತದ ಸಂಖ್ಯೆ | ವಿಷಯ | ಸದರಿ ಭೂಮಾಪಕರುಗಳಿಗೆ ಸ್ವೀಕೃತಿಯಾಗಿರುವ ದಿನಾಂಕ: |
|---|---|---|---|
| 1 | BBMP/LC/PR/700/2009-10 | ಶ್ರೀಮತಿ ಎಲ್.ಪ್ರಭಾವತಿ, ನಂ.47/1, 17ನೇ ಅಡ್ಡರಸ್ತೆ, ಮಲ್ಲೇಶ್ವರಂ | 16.08.2010 |
| 2 | ARO(JRN)/RIW/73/PR25/2008-09 | ಕೋಡಿಹಳ್ಳಿ ನಾರಾಯಣಪ್ಪ ಗಾರ್ಡ್‌ನ್‌ನ್ನು ಖಾತೆ ನೊಂದಾವಣೆಗಾಗಿ ಕಡತಗಳು: ರಾಜಪ್ಪ, ಯಲ್ಲಮ್ಮ ಪಾರ್ವತಮ್ಮ ಭೂಲಕ್ಷ್ಮಮ್ಮ. | 08.03.2011 |
| 3 | A3(1)PR/73/2011-12 | ಶ್ರೀ. ಎಂ. ವೆಂಕಟೇಶ್, ನಂ11, (ಹಳೆ 57), 2ನೇ ಮುಖ್ಯರಸ್ತೆ, ಬಿ.ಚೆನ್ನಸಂದ್ರ, ವಾರ್ಡ್ 50 | 31.05.2011 |
| 4 | MR09/A/2010-11, MR5/2009-10, MR/45/2010-11 | ಮೆ॥ ವೈಷ್ಣವಿ ಕನ್‌ಸ್ಟ್ರಕ್ಷನ್ಸ್, ನಂ23/1, ಹೊಸಗ್ರಾಮ ಠಾಣ, ಸುಲ್ತಾನ್ ಪಾಳ್ಯ. | 03.10.2011 |
| 5 | ARO/DM/RI/687/10-11 | ವಾರ್ಡ್–115ರ ಚರ್ಚು ಮುಂಭಾಗದಲ್ಲಿರುವ 8 ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡುವ ಬಗ್ಗೆ. | 12.10.2011 |
| 6 | A3(4)PR/351/2011-12 | ಶ್ರೀ. ಬಿ.ವಿ. ದಾಸೇಗೌಡ ರವರಿಗೆ 'ಬಿ' ಖಾತೆ ನೀಡುವ ಬಗೆ ಸ್ವತ್ತಿನ ಸಂಖ್ಯೆ: 11, 11ನೇ ಮುಖ್ಯರಸ್ತೆ, 7ನೇ ಕ್ರಾಸ್, ರಾಘವೇಂದ್ರ ಬ್ಲಾಕ್. | 14.02.2012 |
| 7 | DAW/143/KTR/1861/2010-11 | ಶ್ರೀ. ಎಂ.ಎಂ. ಅನಂದ್‌ರಾಮ್ ಮತ್ತು ಇತರರು ನಂ 185, ರಾಷ್ಟ್ರೀಯ ವಿದ್ಯಾಲಯ ರಸ್ತೆ ನಂ59, ಮಾವಳ್ಳಿ ಮುಖ್ಯರಸ್ತೆ, ಖಾತಾ ಒಂದು ಗೂಡಿಸುವ ಬಗ್ಗೆ. (1+2) | 21.08.2012 |
| 8 | JC(W)15/1084/2012-13 | ಯಶವಂತಪುರ ಪೊಲೀಸ್ ಠಾಣೆ ಎದುರು ಖಾಲಿ ಜಾಗ ಇರುವ ಬಗ್ಗೆ. | 08.11.2012 |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕಂಡ ಎಲ್ಲಾ ಕಡತಗಳನ್ನು ಸದರಿ ಭೂಮಾಪಕರುಗಳ ವೈಯುಕ್ತಿಕ ಕಡತಗಳೊಂದಿಗೆ ಈ ವರದಿಯೊಂದಿಗೆ ಕಳಹಿಸಿದ್ದು, ಈ ಸಂಬಂಧ ಕೂಡಲೇ ಕ್ರಮ ಕೈಗೊಂಡು ವರದಿಯನ್ನು 15 ದಿವಸಗಳೊಳಗಾಗಿ ಸಮಿತಿಯ ಅವಗಾಹನೆಗೆ ತರಲು ಸಂಬಂಧಿಸಿದವರಿಗೆ ಆದೇಶಿಸಲು ಆಯುಕ್ತರನ್ನು ಕೋರಿದೆ.

ಇದು ಪಾಲಿಕೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತಾಸಕ್ತಿಯಿಂದ ಎಂದು ಪರಿಗಣಿಸಲು ಕೋರಿದೆ.

ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

**ಪ್ರತಿಯನ್ನು:**

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.*
5. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
6. *ಜಂಟಿ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
7. *ಜಂಟಿ ಆಯುಕ್ತರು (ಆಸ್ತಿಗಳು) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
8. *ಕಛೇರಿ ಪ್ರತಿ*